ನಾದ ಬಿದಿರಿನಿಂದ ಮಾಡಿದ ಕೊಳಲಿನಷ್ಟು ಮಾಧುರ್ಯಪೂರ್ಣವಾಗಿರುವುದಿಲ್ಲ.

◆ **ಕುಸ್ತಿಪಟು ಆಗಬೇಕಿದ್ದವರು ಕೊಳಲು ಎಕ್ಸ್‌ಪರ್ಟ್ ಆದಿರಿ. ಮನೆಯಲ್ಲಿ ಸಂಗೀತದ ಗಂಧಗಾಳಿ ಇಲ್ಲದಿದ್ದರೂ ನಿಮ್ಮ ಸಂಗೀತ ಕಲಿಕೆ, ಸಾಧನೆ ವಿಭಿನ್ನ ಹಾದಿಯಲ್ಲಿ ಸಾಗಿ ವಿಶ್ವವಿಖ್ಯಾತರಾಗಲು ಹೇಗೆ ಸಾಧ್ಯವಾಯಿತು?**

ನಮ್ಮ ತಂದೆ ಕುಸ್ತಿಯಲ್ಲಿ ಪಳಗಿದವರು. ಸಹಜವಾಗಿಯೇ ನಾನು ಕೂಡ ಕುಸ್ತಿಪಟು ಆಗಬೇಕೆಂದು ಆಸೆಪಟ್ಟರು. ನಮ್ಮ ತಾಯಿ ನಾನು ಆರು ವರ್ಷ ಇರುವಾಗಲೇ ನಮ್ಮನ್ನಗಲಿದರು. ತಂದೆಯ ಆಸೆಯಂತೆ ಸ್ವಲ್ಪದಿನ ಕುಸ್ತಿ ಕಲಿತೆ. ಆದರೆ ಪಕ್ಕದ ಮನೆಯಲ್ಲಿ ನಿತ್ಯವೂ ಕೇಳುತ್ತಿದ್ದ ಸಂಗೀತದ ನಾದಕ್ಕೆ ಮಾರುಹೋಗಿ ನಾನೂ ಸಂಗೀತ ಕಲಿಯಬೇಕೆನಿಸಿತು. ಹದಿನೈದು ವರ್ಷದ ಹುಡುಗನಾಗಿದ್ದಾಗ ಹಿಂದೂಸ್ತಾನಿ ಗಾಯನ ಕಲಿತೆ. ಅಲ್ಲಿಂದ ಮುಂದೆ ಬಾನ್ಸುರಿ ನುಡಿಸುವತ್ತ ಮನಸ್ಸು ವಾಲಿತು. ಹಾಗೆಂದು ನಮ್ಮ ಮನೆತನದಲ್ಲಿ ಯಾರೂ ಸಂಗೀತಗಾರರಿಲ್ಲ. ತಂದೆಗೆ ನಾನು ಸಂಗೀತಗಾರನಾಗಬೇಕು ಎಂಬ ಆಸೆಯೂ ಇರಲಿಲ್ಲ. ಇಂತಹ ವಾತಾವರಣದಿಂದ ಬಂದ ನನಗೆ ನಾದದೇವತೆ ಒಲಿದದ್ದೇ ನನ್ನ ಅದೃಷ್ಟ.

◆ **ಪಂ. ಶಿವಕುಮಾರ್ ಶರ್ಮ ಜೊತೆಗೂಡಿದ 'ಶಿವ–ಹರಿ' ಕಾಂಬಿನೇಷನ್ ಬಾಲಿವುಡ್ ಸಂಗೀತದಲ್ಲಿ ಸಂಚಲನ ಮೂಡಿಸುವಷ್ಟು ಜನಪ್ರಿಯವಾಯಿತು. ಬಾನ್ಸುರಿ–ಸಂತೂರ್ ಎರಡೂ ವಾದ್ಯಗಳ ನುಡಿಸಾಣಿಕೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಹೇಗೆ?**

ಪಂ. ಶಿವಕುಮಾರ್ ಶರ್ಮ ಅವರ ಸಂತೂರ್ ವಾದನದ ನಾದಕ್ಕೆ ಮಾಂತ್ರಿಕ ಶಕ್ತಿಯಿದೆ. ಸಂತೂರ್–ಬಾನ್ಸುರಿ ಕಾಂಬಿನೇಷನ್ ಬರೀ ಬಾಲಿವುಡ್ ಸಂಗೀತದಲ್ಲಿ ಅಷ್ಟೇ ಅಲ್ಲ; ಜುಗಲ್‌ಬಂದಿಗಳೂ ಜನಾನುರಾಗಿಯಾಗಿವೆ. ತಂತಿ–ಸುಷಿರ ವಾದ್ಯಗಳಲ್ಲಿ ಸ್ವರಸಂಚಾರ ಮಂದ್ರ, ಮಧ್ಯ, ತಾರಕ ಮೂರೂ ಸ್ಥಾಯಿ–ಸಪ್ತಕಗಳಲ್ಲಿ ಹೊಮ್ಮಿದಾಗ ವಿಶಿಷ್ಟ ಅನುಭೂತಿ ಮೂಡಿಸುತ್ತದೆ. ಬಾನ್ಸುರಿ ಸುಷಿರ ವಾದ್ಯ, ಸಂತೂರ್ ತಂತಿವಾದ್ಯ. ಆದರೂ ರಾಗಗಳನ್ನು ನುಡಿಸುವಾಗ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುತ್ತೇವೆ. ಒಂದೊಂದು ಕಛೇರಿಯೂ ಒಂದೊಂದು ಪರೀಕ್ಷೆ, ಪಾಠಶಾಲೆ ಇದ್ದ ಹಾಗೆ ಅನಿಸುತ್ತಿತ್ತು. ರಾಗಗಳ ವಿಸ್ತರಣೆ, ಮನೋಧರ್ಮಕ್ಕೂ ಆದ್ಯತೆ ನೀಡಿಕೊಂಡು, ಲಯವಾದ್ಯದೊಂದಿಗೆ ರಾಗಗಳ ಸೊಬಗನ್ನು ಬೆಸೆದುಕೊಂಡು ನುಡಿಸಿದಾಗ ಕೇಳುಗರಿಗೆ ವಿಶಿಷ್ಟ ಅನುಭವ ಕೊಡುತ್ತದೆ. ಬಾಲಿವುಡ್ ಸಿನಿಮಾಗಳಾದ 'ಸಿಲ್‌ಸಿಲಾ', 'ಲಮ್ಹೆ', 'ಚಾಂದನಿ' ಹಾಗೂ 'ಪರಂಪರಾ' ಚಿತ್ರಗಳಲ್ಲಿ ನಮ್ಮಿಬ್ಬರ ರಾಗಸಂಯೋಜನೆ, ನುಡಿಸಾಣಿಕೆ ಜನಪ್ರಿಯ ಆಗಿದೆ.

◆ **ಕೊಳಲಿನಲ್ಲಿ ಕೃಷ್ಣನನ್ನು ಕಾಣುತ್ತೇನೆ ಎಂಬ ಮಾತನ್ನು ಹೇಗೆ ವಿಶ್ಲೇಷಿಸುತ್ತೀರಿ?**

ಶ್ರೀಕೃಷ್ಣ ಕೊಳಲನ್ನು ಬಹುವಾಗಿ ಪ್ರೀತಿಸುತ್ತಿದ್ದ. ಬೃಂದಾವನದಲ್ಲಿ ಗೋಪಿಕಾ ಸ್ತ್ರೀಯರನ್ನು ಸೆಳೆಯುತ್ತಿದ್ದ ಕೃಷ್ಣನ ಕೊಳಲ ನಾದಕ್ಕೆ ಪಶುಪಕ್ಷಿಗಳೂ ತಲೆದೂಗುತ್ತಿದ್ದವು. ಕೊಳಲಿನ ನಾದ ಮಾಧುರ್ಯವೇ ಹಾಗೆ. ನಾನು ಬಾನ್ಸುರಿ ನುಡಿಸುವಾಗ ಪ್ರತೀ ಸ್ವರದಲ್ಲಿ, ಎಳೆಎಳೆಯಲ್ಲೂ ಕೃಷ್ಣನನ್ನೇ ಕಾಣುತ್ತೇನೆ. ಇದೇ ನನಗೆ ಶಕ್ತಿ ತುಂಬುತ್ತದೆ. ಆ ನಾದದಲ್ಲಿ ಮಗ್ನನಾದಾಗ ಮಧುರಾತಿಮಧುರ ಸಂಗೀತ ಕೇಳುಗರಿಗೆ ಲಭಿಸುತ್ತದೆ. ಅಲ್ಲದೆ ನಾನು ದೇವಸ್ಥಾನಗಳಿಗೆ ಹೋಗುವುದೇ ಇಲ್ಲ. ಬಾನ್ಸುರಿಯೇ ನನ್ನ ದೇವರು. ಯಾವಾಗ ನನಗೆ ದೇವರನ್ನು ಕಾಣಬೇಕು ಅನಿಸುತ್ತದೋ ಆಗೆಲ್ಲಾ ಬಾನ್ಸುರಿ ನುಡಿಸಿ ಧ್ಯಾನ ಮಾಡುತ್ತೇನೆ. ಆ ಸಂದರ್ಭದಲ್ಲಿ ಉಂಟಾಗುವ ಭಾವನೆಗಳನ್ನು ವಿವರಿಸುವುದೂ ಕಷ್ಟ. ಬಾನ್ಸುರಿ ನಾದದಲ್ಲಿ ನನ್ನನ್ನು ನಾನೇ ಮರೆಯುತ್ತೇನೆ.

◆ **ಬಾನ್ಸುರಿ ನುಡಿಸಲು ಉಸಿರು ನಿಯಂತ್ರಣ ಸಾಮರ್ಥ್ಯ ಬಹಳ ಮುಖ್ಯ. ಈ ವಯಸ್ಸಿನಲ್ಲೂ ಇದನ್ನು ಹೇಗೆ ಕಾಪಾಡಿಕೊಂಡು ಬಂದಿರಿ?**

ಸುಷಿರ ವಾದ್ಯಗಳನ್ನು ನುಡಿಸಲು ಉಸಿರು ನಿಯಂತ್ರಣ (breath control) ಇರಲೇ ಬೇಕು. ಸತತ ಸಾಧನೆಯಿಂದ ಅದು ಸಾಧ್ಯ. ನಿತ್ಯವೂ ನಾನು ಮಾಡುವ 'ಯೋಗ'ದಿಂದ (ಬಾನ್ಸುರಿ) ಅದು ಸಾಧ್ಯ. ಸಂಗೀತ ಕಛೇರಿಗಳು ಸದಾ ಇರುವುದರಿಂದ ಪ್ರಯಾಣದಲ್ಲೇ ಬಹಳ ಕಾಲ ಕಳೆಯುವುದಾದರೂ ಬಾನ್ಸುರಿ ಕೈಗೆ ತೆಗೆದುಕೊಂಡು ಸ್ವರಾಲಾಪ ಮಾಡಿದ ಕೂಡಲೇ ಉಸಿರು ನಿಯಂತ್ರಣ ಸಾಮರ್ಥ್ಯ ತಾನಾಗೇ ಬರುತ್ತದೆ. ಆದರೆ ಇದಕ್ಕೆ ಅನುಭವ, ಸಾಧನೆ, ಪರಿಶ್ರಮ ಬೇಕೇಬೇಕು.

◆ **ಸಂಗೀತ ತಾಲೀಮನ್ನು ಗುರು–ಶಿಷ್ಯ ಪರಂಪರಾ ರೀತಿಯಲ್ಲಿ ಜನಪ್ರಿಯಗೊಳಿಸಿದವರು ನೀವು. ಈ ಪ್ರಾಚೀನ ಕಲಿಕಾ ವಿಧಾನದ ಬಗ್ಗೆ ಹೇಳಿ.**

ಸಂಗೀತದಲ್ಲಿ ಗುರು–ಶಿಷ್ಯ ಪರಂಪರಾ ಎಂದರೆ ಅದೊಂದು ವಿಶಿಷ್ಟ ಪದ್ಧತಿ. ಗುರುವಿಗೆ ಮುಖಾಮುಖಿಯಾಗಿ ಸಂಗೀತ ಕಲಿಯುವುದು ಮುಖ್ಯ. ಸಂಗೀತದ ಹಲವು ಆಯಾಮಗಳನ್ನು ನಿಖರವಾಗಿ, ರಾಗಗಳಲ್ಲಿರುವ ತೀವ್ರ, ಕೋಮಲ, ಶುದ್ಧ ಸ್ವರಗಳ ಸರಿಯಾದ ಜ್ಞಾನ ಪಡೆಯಲು ಗುರುಮುಖೇನ ಕಲಿಕೆ ಬಹಳ ಪ್ರಯೋಜನಕಾರಿ. ಇದಕ್ಕಾಗಿ ಮುಂಬಯಿಯಲ್ಲಿ 'ವೃಂದಾವನ ಗುರುಕುಲ' ಸ್ಥಾಪಿಸಿದೆ. ವಿದೇಶದಲ್ಲಿರುವ ಭಾರತೀಯ ಸಂಗೀತಾಸಕ್ತರಿಗಾಗಿ ನೆದರ್‌ಲ್ಯಾಂಡ್‌ನಲ್ಲೂ ಒಂದು ಗುರುಕುಲ ಸ್ಥಾಪಿಸಿದ್ದೇನೆ. ■

## ಸಾಧನೆಯ ಪಯಣ

1938, ಜುಲೈ ಒಂದರಂದು ಉತ್ತರಪ್ರದೇಶದ ಅಲಹಾಬಾದ್‌ನಲ್ಲಿ ಜನಿಸಿದ ಪಂ. ಚೌರಾಸಿಯ 15ನೇ ವಯಸ್ಸಿಗೆ ಸಂಗೀತವನ್ನು ಪಂ. ರಾಜಾರಾಮ್ ಬಳಿ, ಮುಂದೆ ಕೊಳಲನ್ನು ವಾರಾಣಸಿಯ ಪಂ. ಬೋಲಾನಾಥ್ ಪ್ರಸನ್ನ ಅವರ ಬಳಿ ಕಲಿತರು. ಸತತ ಎಂಟು ವರ್ಷಗಳ ಕಾಲ ಕಲಿತ ಬಳಿಕ 1957ರಲ್ಲಿ ಒಡಿಶಾದ ಕಟಕ್‌ನಲ್ಲಿ ಆಕಾಶವಾಣಿಯ ನಿಲಯ ಕಲಾವಿದರಾಗಿ ಸೇರಿದರು. 1960ರಲ್ಲಿ ಮುಂಬಯಿ ಆಕಾಶವಾಣಿಯಲ್ಲಿ ಸ್ವರಸಂಯೋಜಕ ಹಾಗೂ ನಿಲಯ ಕಲಾವಿದರಾದರು.

ಸಂಗೀತ ಸಾಧಕ ಅಲ್ಲಾವುದ್ದೀನ್ ಖಾನ್ ಮಗಳು ಅನ್ನಪೂರ್ಣಾದೇವಿ ಗರಡಿಯಲ್ಲಿ ಪಳಗಿದರು. 1960ರಲ್ಲಿ ಪಂ. ಶಿವಕುಮಾರ್ ಶರ್ಮ ಅವರೊಂದಿಗೆ ಬಾನ್ಸುರಿ– ಸಂತೂರ್ ಜುಗಲ್‌ಬಂದಿ ನೀಡಲಾರಂಭಿಸಿದರು. 1967ರಲ್ಲಿ 'ಕಾಲ್ ಆಫ್ ದಿ ವ್ಯಾಲಿ' ಎಂಬ ಆಲ್ಬಂ ಬಿಡುಗಡೆ ಮಾಡಿದರು. ಶಾಸ್ತ್ರೀಯ ಸಂಗೀತದ ಜೊತೆಗೆ ಸಿನಿಮಾ ಸಂಗೀತ, ಜಾನಪದ ಸಂಗೀತದ ಮೂಲಕ ಸೆಳೆದಿರುವ ಪಂ.ಚೌರಾಸಿಯ ಅವರಿಗೆ ಪದ್ಮಭೂಷಣ ಪ್ರಶಸ್ತಿ ಸೇರಿದಂತೆ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಿವೆ.



ಪಂ. ಹರಿಪ್ರಸಾದ್ ಚೌರಾಸಿಯಾ ಅವರೊಂದಿಗೆ ಪಂ. ಶಿವಕುಮಾರ್ ಶರ್ಮಾ

## ಬಾನ್ಸುರಿ-ಗಾಯನ

ಬಾನ್ಸುರಿ ವಾದನ ಮತ್ತು ಗಾಯನ ಎರಡಕ್ಕೂ ಬಹಳಷ್ಟು ಸಾಮ್ಯತೆ ಇದೆ. ಹಿಂದೂಸ್ತಾನಿ ಶಾಸ್ತ್ರೀಯ ಗಾಯನದಲ್ಲಿ ಇರುವಂತೆ ಆಲಾಪ, ಸ್ವರಪ್ರಸ್ತಾರ, ವಿಲಂಬಿತ್ ಏಕ್‌ತಾಲ್, ದೃತ್ ತೀನ್‌ತಾಲ್ ಲಯಗಳು.. ಹೀಗೆ ಇದೇ ಪ್ರಕಾರವಾಗಿ ಬಾನ್ಸುರಿ ನುಡಿಸಾಣಿಕೆಯೂ ಇರುತ್ತದೆ.